ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.

ಸಿಸಿ ನಂಬರ್ **995/2023**

ಸಾಕ್ಷಿಯ ಹೆಸರು : ಕೃಷ್ಣನಾಯಕ್ ಸಿ.ಡಬ್ಲ್ಯು 1

ತಂದೆಯ ಹೆಸರು : ಖಂಡ್ಯಾನಾಯಕ್ ಪಿ.ಡಬ್ಲ್ಯು 1

ವಯಸ್ಸು : 41 ವರ್ಷ

ಉದ್ಯೋಗ : ಪಿ.ಎಸ್.ಐ

ವಾಸ ಸ್ಥಳ : ಅಜ್ಜಂಪುರ

ದಿನಾಂಕ:**03-12-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:-

ನಾನು 2021 ರಿಂದ 2024 ಜುಲೈ ತಿಂಗಳವರೆಗೆ ತರೀಕೆರೆಯಲ್ಲಿ ಪಿ.ಎಸ್.ಐ ಎಂದು ಕೆಲಸ ಮಾಡಿದ್ದೇನೆ.

ಈ ಪ್ರಕರಣದಲ್ಲಿ ದಿ:16-11-2022 ರಂದು ಸಂಜೆ 6-00 ಸುಮಾರಿಗೆ ನಾನು ಠಾಣೆಯಲ್ಲಿ ಇದ್ದಾಗ ಬೇಲೇನಹಳ್ಳಿ ತಾಂಡ್ಯದಲ್ಲಿ ಯಾವುದೋ ಒಬ್ಬ ವ್ಯಕ್ತಿಯು ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡುತ್ತಿದ್ದಾನೆ ಎಂಬ ಖಚಿತ ಮಾಹಿತಿ ಬಂದಿತು. ಸದರಿ ವಿಷಯವನ್ನು ಚಾಸಾ-4 ರಿಂದ 6 ರವರಿಗೆ ತಿಳಿಸಿ ಅವರನ್ನು ಜೊತೆಗೆ ಕರೆದುಕೊಂಡು ಇಲಾಖಾ ವಾಹನದಲ್ಲಿ 6-15 ಕ್ಕೆ ಠಾಣೆಯಿಂದ ಹೊರಟು 6-20 ನಿಮಿಷಕ್ಕೆ ಬೇಲೇನಹಳ್ಳಿ ಗ್ರಾಮಕ್ಕೆ ಹೋದೆವು. ಅಲ್ಲಿದ್ದ ಚಾಸಾ-2 ಮತ್ತು 3 ಇವರನ್ನು ಪಂಚರಾಗಲು ಕೋರಿ ಜೊತೆಯಲ್ಲಿ ಕರೆದುಕೊಂಡೆವು. ರಸ್ತೆಯ ತಿರುವಿನಲ್ಲಿ ಒಬ್ಬ ವ್ಯಕ್ತಿಯು ಒಂದು ಪ್ಲಾಸ್ಟಿಕ್ ಚೀಲದಲ್ಲಿ ಯಾವುದೋ ವಸ್ತುಗಳನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿರುವುದು ಕಂಡುಬಂತು. ಕೂಡಲೇ ದಾಳಿ ಮಾಡಿದಾಗ ಸಾರ್ವಜನಿಕರು ಮತ್ತು ಮಾರಾಟ ಮಾಡುತ್ತಿದ್ದ ವ್ಯಕ್ತಿ ಓಡಿಹೋದರು. ವಿಚಾರಿಸಲಾಗಿ ಆತನ ಹೆಸರನ್ನು ಚಂದ್ರಾನಾಯಕ್ ಎಂದು ಗೊತ್ತಾಯಿತು. ಚೀಲವನ್ನು ಪರೀಕ್ಷಿಸಲಾಗಿ ಅದರಲ್ಲಿ 90 ಎಂ.ಎಲ್ ನ 95 ಓ.ಸಿ ವಿಸ್ಕಿ ಟೆಟ್ರಾ ಪ್ಯಾಕೇಟುಗಳು ಇದ್ದವು. ಅವುಗಳನ್ನು ಸ್ವಾಧೀನದಲ್ಲಿ ಇಟ್ಟುಕೊಳ್ಳಲು ಮತ್ತು ಮಾರಾಟ ಮಾಡಲು ಸ್ಥಳದಲ್ಲಿ ಯಾವುದೇ ಪರವಾನಗೆ ಇರಲಿಲ್ಲ. ಕಾರಣ ಪಂಚರ ಸಮಕ್ಷಮ ಸಂಜೆ 6-30 ರಿಂದ 7-30 ರ ಮದ್ಯದಲ್ಲಿ ಪಂಚನಾಮೆಯನ್ನು ಜರುಗಿಸಿ ಮದ್ಯವನ್ನು ಪ್ಲಾಸ್ಟಿಕ್ ಚೀಲದ ಸಮೇತ ನನ್ನ ವಶಕ್ಕೆ ಪಡೆದುಕೊಂಡೆನು. ನಂತರ ಮುದ್ದೆಮಾಲಿನೊಂದಿಗೆ ಠಾಣೆಗೆ ಹಿಂತಿರುಗಿ ಸರ್ಕಾರದ ತರ್ಫೆ ನಾನೇ ಪಿರ್ಯಾದಿಯನ್ನು ಕೊಟ್ಟಿರುತ್ತೇನೆ. ಪಂಚನಾಮೆಯನ್ನು ನಿ.ಪಿ-1, ಸಾಕ್ಷಿಯ ಸಹಿಯನ್ನು ನಿ.ಪಿ-1(ಎ) ಎಂದು ಗುರುತಿಸಲಾಯಿತು. ಭಾವಚಿತ್ರವನ್ನು ನಿ.ಪಿ-2 ಮತ್ತು ದೂರನ್ನು ನಿ.ಪಿ-3, ಸಾಕ್ಷಿಯ ಸಹಿಯನ್ನು ನಿ.ಪಿ-3(ಎ) ಎಂದು ಗುರುತಿಸಲಾಯಿತು. ಮುದ್ದೆಮಾಲನ್ನು ಚೀಲದ ಸಮೇತವಾಗಿ ಮು.ಮಾ-1 ಎಂದು ಗುರುತಿಸಲಾಯಿತು. ಓಡಿಹೋದ ಆರೋಪಿ ಈ ದಿನ ನ್ಯಾಯಾಲಯದ ಮುಂದೆ ಇದ್ದಾನೆ.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>

ಮು.ಮಾ-1 ರಂತಹ ಟೆಟ್ರಾಪ್ಯಾಕೆಟುಗಳು ಬಾರ್ ಗಳಲ್ಲಿ ಸಾಮಾನ್ಯವಾಗಿ ಸಿಗುತ್ತವೆ ಎಂದರೆ ಸರಿ. ನಾನು ಸ್ಥಳಕ್ಕೆ ಹೋಗಿಲ್ಲ, ಯಾವುದೇ ದಾಳಿ ಮಾಡಿಲ್ಲ ಎಂದರೆ ಸರಿಯಲ್ಲ, ಆರೋಪಿಯಿಂದ ಯಾವುದೇ ಮದ್ಯವನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಕೊಟ್ಟ ದೂರಿಗೆ ಅನ್ವಯವಾಗಿ ಮುದ್ದೆಮಾಲನ್ನು ಕೇಸಿನಲ್ಲಿ ಹಾಕಿದ್ದೇನೆ ಎಂದರೆ ಸರಿಯಲ್ಲ. ಠಾಣೆಯ ಅಂಕಿ-ಸಂಖ್ಯೆಗೋಸ್ಕರ ಸುಳ್ಳು ದೂರನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-4 ರಿಂದ 6 ರವರು ನನ್ನ ಕಿರಿಯ ಅಧಿಕಾರಿಗಳು ಎಂದರೆ ಸರಿ. ನಿ.ಪಿ-1 ಕ್ಕೆ ಚಾಸಾ-4 ರಿಂದ 6 ರವರು ಸಹಿ ಮಾಡಿರುವುದಿಲ್ಲ ಎಂದರೆ ಸರಿ, ಸಾಕ್ಷಿಯು ಅದರ ಅವಶ್ಯಕತೆ ಇರುವುದಿಲ್ಲ ಎಂದು ಹೇಳುತ್ತಾರೆ. ಚಾಸಾ-2 ಮತ್ತು 3 ನಮ್ಮ ಠಾಣೆಯ ಖಾಯಂ ಪಂಚರು ಎಂದರೆ ಸರಿಯಲ್ಲ.

<u>ಮರುವಿಚಾರಣೆ :</u> ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.